**MVC 129/2021**

**ಅಪರ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಎಂ.ವಿ.ಸಿ.ಸಂಖ್ಯೆ : 129/2021**

**ಆರ್.ಡಬ್ಲ್ಯೂ-1**

| | |
|---|---|
| **ಹೆಸರುಃ** | ಪ್ರಕಾಶ್ |
| **ತಂದೆಯ ಹೆಸರುಃ** | ಲೇಟ್ ಎಸ್.ಶಿವಣ್ಣ |
| **ವಯಸ್ಸುಃ** | 54 ವರ್ಷ |
| **ವೃತ್ತಿಃ** | ಅಸಿಸ್ಟೆಂಟ್ ಮ್ಯಾನೇಜರ್ |
| **ವಾಸಃ** | ಮೈಸೂರು. |

ದಿನಾಂಕ **31.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ. ಎಸ್.ಸಿ.ಜಿ. ವಕೀಲರಿಂದಃ**

ನಾನು ಕಳೆದ 20 ವರ್ಷಗಳಿಂದ ನ್ಯೂ ಇಂಡಿಯಾ ಅಶುರೆನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಪ್ರಸ್ತುತ ಅದರ ಅಸಿಸ್ಟೆಂಟ್ ಮ್ಯಾನೇಜರ್ ಆಗಿರುತ್ತೇನೆ. ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಕಂಪನಿಯವರು ನೀಡಿದ ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್.1 ಎಂದು ಗುರುತಿಸಲಾಯಿತು. 2 ನೇ ವಿಮಾ ಕಂಪನಿ ಭೋಪಾಲ್ ಕಛೇರಿಯವರು ಇ-ಮೇಲ್ ಮುಖಾಂತರ ರವಾನಿಸಿದ ವಿವರದ ಪ್ರತಿ, ಕಛೇರಿಯ ತನಿಖಾಧಿಕಾರಿಗಳು ಪಡೆದುಕೊಂಡು ಹಾಜರುಪಡಿಸಿದ ಡ್ರೈವಿಂಗ್ ಲೈಸೆನ್ಸ್ ವೆರಿಫಿಕೇಷನ್ ರಿಪೋರ್ಟ್, ಇ-ರೆಸಿಪ್ಟ್ ಮತ್ತು ಡ್ರೈವಿಂಗ್ ಲೈಸೆನ್ಸ್ ಎಕ್ಸ್ಟ್ರಾಕ್ಟ್ ಗಳನ್ನು ಒಟ್ಟಾಗಿ ನಿಆರ್.2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ. ಎಸ್.ಎಂ. ವಕೀಲರಿಂದ :**

ಅಪಘಾತಪಡಿಸಿದ ವಾಹನದ ಚಾಲಕನ ವಿರುದ್ಧ ವಾಹನ ಪರವಾನಿಗೆ ಹೊಂದಿರುವುದಿಲ್ಲ ಎಂದು ಪ್ರಕರಣ ದಾಖಲಿಸಿರುವುದಿಲ್ಲ ಎಂದರೆ ಸರಿ .

ನಿಆರ್.2 ಅನ್ನು ಸೃಷ್ಟಿಸಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನದ ವಿಮೆಯು ಅಪಘಾತ ಕಾಲಕ್ಕೆ ಚಾಲ್ತಿಯಲ್ಲಿತ್ತು ಎಂದರೆ ಸರಿ . ಆ ಕಾರಣ ವಿಮಾ ಕಂಪನಿಯವರು ಪರಿಹಾರ ಕೊಡಲು ಬಾದ್ಯಸ್ಥರೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**